# ಹಾವೇರಿ

# ಜಿಲ್ಲೆಯ ಸಂಕ್ಷಿಪ್ತ

# ಪಕ್ಷಿನೋಟ

# ಹಾವೇರಿ ಜಿಲ್ಲೆಯ ಕಿರು ಪರಿಚಯ

ಉತ್ತರ ಕರ್ನಾಟಕದ ಹೆಬ್ಬಾಗಿಲು ಹಾಗೂ ಏಲಕ್ಕಿ ಕಂಪಿನ ನಾಡು ಎಂದು ಪ್ರಖ್ಯಾತಿ ಹೊಂದಿದ ಹಾವೇರಿ ಜಿಲ್ಲೆಯು 24–08–1997 ರಂದು ಹೊಸ ಜಿಲ್ಲೆಯೆಂದು ಘೋಷಿಸಿ ಇಂದಿಗೆ ಸುಮಾರು 20 ವರ್ಷ ಮುಗಿದಿರುತ್ತದೆ. ಜಿಲ್ಲೆಯ 7 ತಾಲೂಕುಗಳನ್ನು ಹೊಂದಿದ್ದು,ಒಟ್ಟು ಭೌಗೋಳಿಕ ವಿಸ್ತೀರ್ಣವು 4823 ಚ.ಕಿ.ಮೀ ಇದ್ದು,ಇದು ರಾಜ್ಯದ ವಿಸ್ತೀರ್ಣದ ಶೇ.2.51% ರಷ್ಟು ಇದೆ. ಆಡಳಿತ ವಿಕೇಂದ್ರೀಕರಣದ ದೃಷ್ಟಿಯಿಂದ ಜಿಲ್ಲೆಯಲ್ಲಿ ಹಾವೇರಿ ಮತ್ತು ಸವಣೂರ ಎರಡು ಕಂದಾಯ ಉಪವಿಭಾಗಗಳನ್ನು ಮಾಡಲಾಗಿದ್ದು,ಹಾವೇರಿ ವಿಭಾಗಕ್ಕೆ ಹಾವೇರಿ,ಬ್ಯಾಡಗಿ, ಹಿರೇಕೆರೂರು ಮತ್ತು ರಾಣೇಬೆನ್ನೂರು ತಾಲ್ಲೂಕುಗಳು ಹಾಗೂ ಸವಣೂರ ಉಪವಿಭಾಗಕ್ಕೆ ಶಿಗ್ಗಾಂವ, ಹಾನಗಲ್ಲ ಮತ್ತು ಸವಣೂರ ತಾಲ್ಲೂಕುಗಳು ಬರುತ್ತದೆ. ಜಿಲ್ಲೆಯ 7 ತಾಲ್ಲೂಕುಗಳಲ್ಲಿ 19 ಹೋಬಳಿಗಳು ಇರುತ್ತವೆ. ಹಾವೇರಿ ಜಿಲ್ಲೆಯ ಜಿಲ್ಲಾ ಪಂಚಾಯತ ವ್ಯಾಪ್ತಿಯಲ್ಲಿ 7 ತಾಲ್ಲೂಕು ಪಂಚಾಯತಗಳು ಕಾರ್ಯನಿರ್ವಹಿಸುತ್ತಿದ್ದು, ಒಟ್ಟು 232 ಗ್ರಾಮ ಪಂಚಾಯತಗಳನ್ನು ಒಳಗೊಂಡಿದೆ.ಜಿಲ್ಲೆಯಲ್ಲಿ ಒಟ್ಟು 8ಪಟ್ಟಣ/ನಗರ ಸಮುದಾಯಗಳಿವೆ.ಬ್ಯಾಡಗಿ ,ಹಾನಗಲ್ಲ,ಬಂಕಾಪೂರ, ಶಿಗ್ಗಾಂವ,ಸವಣೂರುಗಳಲ್ಲಿ ಪುರಸಭೆ,ಹಾವೇರಿ ಮತ್ತು ರಾಣೇಬೆನ್ನೂರುಗಳಲ್ಲಿ ನಗರಸಭೆ ಮತ್ತು ಹಿರೇಕೆರೂರುನಲ್ಲಿ ಪಟ್ಟಣ ಪಂಚಾಯತ ಇರುವುದು ಹಾಗೂ ಜಿಲ್ಲೆಯ 34 ಜಿಲ್ಲಾ ಪಂಚಾಯತ ಸದಸ್ಯರನ್ನು ಹೊಂದಿರುತ್ತದೆ.

ಸನ್ 2011 ರ ಜನಗಣತಿಯ ಪ್ರಕಾರ ಜಿಲ್ಲೆಯ ಸಾಕ್ಷರತಾ ಪ್ರಮಾಣ ಶೇ.77.4 ಇರುತ್ತದೆ, ಜಿಲ್ಲೆಯ ಸಾಕ್ಷರತೆಯಲ್ಲಿ ಪುರುಷ ಮತ್ತು ಸ್ತ್ರೀಯರಲ್ಲಿ ಅನುಕ್ರಮವಾಗಿ ಶೇ.84.0 ಹಾಗೂ ಶೇ.70.5 ಇರುತ್ತದೆ. ಹಾವೇರಿ ಜಿಲ್ಲೆಯು ಒಂದು ಒಳನಾಡು ಜಿಲ್ಲೆ, ಜಿಲ್ಲೆಯಲ್ಲಿ ವರದಾ, ಕುಮದ್ವತಿ, ಧರ್ಮಾ ಮತ್ತು ತುಂಗಭದ್ರ ನದಿಗಳು ಹರಿಯುತ್ತವೆ. ಜಿಲ್ಲೆಯು ಫಲವತ್ತಾದ ಕಪ್ಪು ಮತ್ತು ಮಸ್ಸಾರಿ ಭೂಮಿಯನ್ನು ಹೊಂದಿರುತ್ತದೆ.

ಹಾವೇರಿ ಜಿಲ್ಲೆಯಲ್ಲಿ ಐತಿಹಾಸಿಕವಾಗಿ ಮತ್ತು ಚಾರಿತ್ರಿಕ ಹಿನ್ನಲೆಯುಳ್ಳ ದೇವಸ್ಥಾನಗಳಾದ ಹಾವೇರಿಯ ಪುರಸಿದ್ದೇಶ್ವರ, ಹಾನಗಲ್ಲನ ಶ್ರೀ ತಾರಕೇಶ್ವರ ದೇವಸ್ಥಾನ,ಸಾತೇನಹಳ್ಳಿಯ ಶ್ರೀ ಶಾಂತೇಶ್ವರ ದೇವರ (ಹನುಮಂತ), ಕದರಮಂಡಲಗಿಯ ಶ್ರೀ ಕಾಂತೇಶ( ಹನುಮಂತ ದೇವರು) ಹಾಗೂ ಕಾಗಿನೆಲೆಯಲ್ಲಿ ನರಸಿಂಹ ಹಾಗೂ ಆದಿಕೇಶವ ದೇವಸ್ಥಾನವಿದ್ದು ಸಂತ ಕನಕದಾಸ ತನ್ನ ಇಷ್ಟದೇವರಾದ ಆದಿಕೇಶವ ಸನ್ನಿದಿಯಲ್ಲಿ ಸನ್ನಿದಿಯಲ್ಲಿ ತನ್ನ ಕೊನೆಯ ದಿನ ಕಳೆದಿದ್ದು ಅನೇಕ ಕವನಗಳು ರಚಿಸಿದ್ದಾರೆ. ಕಾರಡಗಿ ಗ್ರಾಮದ ವೀರಭದ್ರೇಶ್ವರ ದೇವರ ಪ್ರಸಿದ್ದ ದೇವಸ್ಥಾನವಿದೆ. ಬಂಕಾಪುರದಲ್ಲಿ ಓಂಕಾರ ನರಸಿಂಹ ದೇವರ ದೇವಾಲಯ ಇದ್ದು ಹಾಗೂ ಈ ಪ್ರದೇಶದಲ್ಲಿ ಹೆಚ್ಚು ನವಿಲುಗಳಿರುವುದರಿಂದ ನವಿಲಗಳ ಸಂಖ್ಯೆಯನ್ನು ಗುರುತಿಸಿ ನವಿಲುಧಾಮವನ್ನು ಸಹಾ ನಿರ್ಮಿಸಿದ್ದು,ಬಾಡ ಗ್ರಾಮವು ಸ್ವಂತ ಕನಕದಾಸರ ಜನ್ಮಸ್ಥಳವಾಗಿದ್ದು, ಇಲ್ಲಿಯೂ ಸಹ ಶ್ರೀ ಆದಿಕೇಶವ ಗುಡಿ ಇದೆ. ತಮ್ಮ ತತ್ವ ಪದಗಳಿಂದ ನಾಡಿನ ಜನಮನದಲ್ಲಿ ಹೆಸರು ಮಾಡಿರುವ ಶಿಶುನಾಳ ಶರೀಪರ ಗದ್ದುಗೆಯ ಶಿಶುವಿನಾಳದಲ್ಲಿ ಇದ್ದು ಹಲವು ವಿಭಿನ್ನ ಹಾಗೂ ವೈಶಿಷ್ಟ ಪೂರ್ಣಗಳನ್ನೂಳಗೊಂಡ ಹಾವೇರಿ ಜಿಲ್ಲೆ ಹಲವು ವಿಶೇಷಗಳಿಂದ ವಿಶ್ವ ವಿಖ್ಯಾತಿ ಪಡಿದಿದೆ. ಸವಣೂರಿನ ವಿಳ್ಯದಳೆ,ಹಾವೇರಿ ಯಾಲಕ್ಕಿಹಾರ, ರಾಣೇಬೆನ್ನೂರಿನ ಬೀಜೋತ್ಪಾದನೆ,ಇದಲ್ಲದೇ ಇನ್ನೂ ಅನೇಕ ಪ್ರವಾಸೋದ್ಯಮ ಕ್ಷೇತ್ರ ಜಿಲ್ಲೆಯಲ್ಲಿದ್ದು ರಾಜ್ಯದ ಪ್ರವಾಸಿ ಪುಟದಲ್ಲಿ ಹಾವೇರಿ ಜಿಲ್ಲೆಗೆ ತನ್ನದೇ ಆದ ಛಾಪು ಮೂಡಿಸಿದೆ.

ಜಿಲ್ಲೆಗೆ 2017–18 ರಲ್ಲಿ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ ಸ್ಪರ್ದೆಯಲ್ಲಿ ರಾಜ್ಯಕ್ಕೆ 5ಜನ ಪ್ರಥಮ ಸ್ಥಾನ ಪಡೆದು ಜಿಲ್ಲೆಗೆ ಹೆಮ್ಮೆ ಮೂಡಿಸಿದರೊಂದಿಗೆ, ರಾಜ್ಯ ಮಟ್ಟಕ್ಕೆ ಸಮಗ್ರ ವೀರಾಗ್ರಣಿ ಪ್ರಶಸ್ತಿ ವಿಜೇತರಾಗಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿರುತ್ತಾರೆ. ಹಾಗೂ ರಾಷ್ಟ್ರಮಟ್ಟದಲ್ಲಿ ಭಾಗವಹಿಸಿ ಸರಕಾರಿ ಪ್ರೌಢಶಾಲೆಯ ಮಾರತಿ ನಗರ ರಾಣೇಬೆನ್ನೂರು ಶಾಲೆಯ ಕುಮಾರಿ ರೇಣುಕಾ ಅಗಡಿ ಮತ್ತು ಸಂಗಡಿಗರು 3ನೇ ಸ್ಥಾನ ಬಂದು ಹಾವೇರಿ ಜಿಲ್ಲೆಗೆ ಗರಿ ಮೂಡಿಸಿದ್ದಾರೆ. ಹಾಗೂ ಹಾವೇರಿ ಜಿಲ್ಲೆಯು 2016–17 ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಶೇಕಡಾ 70.46 ಪ್ರತಿಶತ ಫಲಿತಾಂಶ ಪಡೆದಿರುತ್ತದೆ.

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ ಹಾವೇರಿ
ಉಪನಿರ್ದೇಶಕರ ಕಾರ್ಯಾಲಯ ಸಾರ್ವಜನಿಕ ಶಿಕ್ಷಣ ಇಲಾಖೆ ಹಾವೇರಿ – 581110
OFFICE OF THE DEPUTY DIRECTOR OF PUBLIC INSTRUCTION HAVERI -
ದೂರವಾಣಿ - ಫ್ಯಾಕ್ಸ : 08375–249232 Emai : ddpihaveri@gemail.com

ದಿನಾಂಕ :– 14–02–2018

## ಹಾವೇರಿ ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಸಂಕ್ಷಿಪ್ತ ವಿವರ

### 1) ಉಪನಿರ್ದೇಶಕರ ಕಛೇರಿಯ ಸಿಬ್ಬಂದಿ ವಿವರ

| ಅ.ನಂ. | ಹುದ್ದೆಯ ವಿವರ | ಮಂಜೂರಿ | ಕಾರ್ಯನಿರ್ವಹಣೆ | ಖಾಲಿ |
|---|---|---|---|---|
| 1 | ಉಪನಿರ್ದೇಶಕರು(ಆಡಳಿತ) | 1 | 1 | 0 |
| 2 | ಶಿಕ್ಷಣಾಧಿಕಾರಿಗಳು | 1 | 1 | 0 |
| 3 | ಡಿವೈಪಿಸಿ ಎಸ್ಎಸ್ಎ ಹಾವೇರಿ | 1 | 1 | 0 |
| 4 | ಡಿವೈಪಿಸಿ ಆರ್ಎಂಎಸ್ಎ ಹಾವೇರಿ | 1 | 1 | 0 |
| 5 | ಶಿಕ್ಷಣಾಧಿಕಾರಿಗಳು(ಮ.ಉ.ಯೋ) | 1 | 1 | 0 |
| 6 | ವಿಷಯ ಪರಿವೀಕ್ಷಕರು | 5 | 4 | 1 |
| 7 | ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿಗಳು | 1 | 0 | 1 |
| 8 | ಎಪಿಸಿಒ(ಎಸ್.ಎಸ್.ಎ.) | 2 | 2 | 0 |
| 9 | ಎಪಿಸಿಒ(ಆರ್.ಎಮ್.ಎಸ್.ಎ) | 1 | 0 | 1 |
| 10 | ವೃತ್ತಿ ವಿಷಯ ಪರಿವೀಕ್ಷಕರು | 1 | 0 | 1 |
| 11 | ವ್ಯವಸ್ಥಾಪಕರು | 1 | 1 | 0 |
| 12 | ಅಧೀಕ್ಷಕರು | 3 | 3 | 0 |
| 13 | ಲೆಕ್ಕ ಅಧೀಕ್ಷಕರು (ಎಸ್.ಎಸ್.ಎ) | 1 | 0 | 1 |
| 14 | ಸಹಾಯಕ ಸಾಂಖ್ಯಿಕ ಅಧಿಕಾರಿಗಳು | 1 | 1 | 0 |
| 15 | ಉರ್ದು ಶಿಕ್ಷಣ ಸಂಯೋಜಕರು | 1 | 1 | 0 |
| 16 | ಪ್ರದಸ | 7 | 7 | 0 |
| 17 | ಶೀಘ್ರಲಿಪಿಗಾರರು | 1 | 0 | 1 |
| 18 | ಬೆರಳಚ್ಚುಗಾರ | 1 | 1 | 0 |
| 19 | ದ್ವಿದಸ | 5 | 5 | 0 |
| 20 | ದ್ವಿ.ದ.ಸ./ಬೆರಳಚ್ಚುಗಾರರು(ಸಿ.ಸಿ.ಟಿ.) | 3 | 1 | 2 |
| 21 | ವಾಹನ ಚಾಲಕರು | 1 | 1 | 0 |
| 22 | ಗ್ರೂಪ–ಡಿ | 8 | 8 | 0 |
|  | ಒಟ್ಟು | 48 | 40 | 8 |

**ಜಿಲ್ಲೆಗೆ ಶೈಕ್ಷಣಿಕವಾಗಿ ಮತ್ತು ಆಡಳಿತಾತ್ಮವಾಗಿ ಜಿಲ್ಲಾ ಉಪನಿರ್ದೇಶಕರ ಕಛೇರಿಗೆ ಈ ಕೆಳಗಿನ ಹುದ್ದೆಗಳ ಮಂಜೂರಾತಿ ಅವಶ್ಯಕವಾಗಿರುತ್ತದೆ.**

- **ಪತ್ರಾಂಕಿತ ಸಹಾಯಕರು**

2) **ಶಾಲೆಗಳ ವಿವರ :–**

| ಶಾಲೆಗಳ ವಿಧ | ಪ್ರಾಥಮಿಕ | ಪ್ರೌಢ | ಒಟ್ಟು |
|---|---|---|---|
| ಸರ್ಕಾರಿ | 1162 | 139 | 1301 |
| ಸಮಾಜ ಕಲ್ಯಾಣ ಇಲಾಖೆ | 28 | 19 | 47 |
| ಸ್ಥಳೀಯ ಸಂಸ್ಥೆ | 01 | 02 | 3 |
| ಅನುದಾನಿತ | 65 | 156 | 221 |
| ಅನುದಾನರಹಿತ | 269 | 85 | 354 |
| ಕೇಂದ್ರಿಯ | 2 | 1 | 3 |
| ಒಟ್ಟು | 1527 | 402 | 1929 |

3) **ಮಕ್ಕಳ ವಿವರ(ಕೆ.ಡಿ.ಪಿ.):– (ಅಕ್ಟೋಬರ 2017)**

| ತರಗತಿ | ಮಕ್ಕಳ ದಾಖಲಾತಿ | ಹಾಜರಾತಿ | ಶೇ. ಹಾಜರಿ |
|---|---|---|---|
| 1 ರಿಂದ 5 | 140906 | 139417 | 98.94 |
| 6 ರಿಂದ 8 | 79834 | 78841 | 98.75 |
| 9 ರಿಂದ 10 | 46268 | 45520 | 98.38 |
| 1 ರಿಂದ 10 | 267008 | 263778 | 98.79 |

4) **ಶಿಕ್ಷಕರ ಹುದ್ದೆಗಳು ಮಂಜೂರಿ ಮತ್ತು ಖಾಲಿ ಹುದ್ದೆಗಳ ವಿವರ:–**

| ವಿವರ | ಮಂಜೂರಿ | ಕಾರ್ಯನಿರ್ವಹಿಸುತ್ತಿರುವವರು | ಖಾಲಿ |
|---|---|---|---|
| ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರು | 5960 | 5551 | 409 |
| ಸರ್ಕಾರಿಪ್ರೌಢ ಶಾಲಾ ಶಿಕ್ಷಕರು | 1176 | 1118 | 58 |
| ಒಟ್ಟು | 7136 | 6669 | 467 |

5) **2017–18 ನೇ ಸಾಲಿನಲ್ಲಿ ಸರಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಅತಿಥಿ ಶಿಕ್ಷಕರ ನೇಮಕಾತಿ:–**

1. ಸರಕಾರಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳ ಪರ್ಯಾಯವಾಗಿ 292 ಅತಿಥಿ ಶಿಕ್ಷಕರ ನೇಮಕಾತಿ ಮಾಡಲಾಗಿದೆ.
2. ಸರಕಾರಿ ಪ್ರೌಢ ಶಾಲೆಗಳಲ್ಲಿ 08 ಅತಿಥಿ ಶಿಕ್ಷಕರ ನೇಮಕಾತಿ ಮಾಡಲಾಗಿದೆ.

**6) ಸನ್ 2017-18 ನೇ ಸಾಲಿಗೆ ಪದವಿಧರ ಪ್ರಾಥಮಿಕ ಶಾಲಾ ಶಿಕ್ಷಕರು(ಎಜಿಟಿ) 263 ಹುದ್ದೆಗಳನ್ನು ಭರ್ತಿ ಮಾಡುವ ಕುರಿತು ಕ್ರಮಕೈಕೊಳ್ಳಲಾಗಿದೆ.**

**7) ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಫಲಿತಾಂಶ ವಿವರ.**

| ವರ್ಷ | ಪರೀಕ್ಷೆಗೆ ಕುಳಿತವರು | ಉತ್ತೀರ್ಣರಾದವರು | ಪ್ರತಿಶತ ಸಾಧನೆ | ರಾಜ್ಯಮಟ್ಟದ ರ್‍ಯಾಂಕ |
|---|---|---|---|---|
| 2015-16 | 19446 | 14497 | 74.55 | 28 |
| 2016-17 | 19665 | 13856 | 70.46 | 26 |

ಉಪನಿರ್ದೇಶಕರು(ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ
ಹಾವೇರಿ


ಹಾವೇರಿ ಜಿಲ್ಲೆ
N
ತಡಸ
ಶಿಶುವಿನಹಾಳ
ಹೂವಿನಸಿಗ್ಲಿ
ಶಿಗ್ಗಾಂವಿ
ಸವಣೂರು
ಬಾಡ
ಬಂಕಾಪುರ
ಹೊಸರಿತ್ತಿ
ಗಳಗನಾಥ
ಗುತ್ತಲ
ಅಗಡಿ
ಹರಳಹಳ್ಳಿ
ಹಾವೇರಿ
ಕನವಳ್ಳಿ
ಹಾನಗಲ್
ಆಡೂರು
ಬಾಳಂಬೀಡ
ಕಬ್ಬೂರು ಗುಡ್ಡ
ಚೌಡಯ್ಯ
ದಾನಪುರ
ಹಿರೂರು
ಸಮ್ಮಸಗಿ
ಕಲ್ಕೇರಿ
ಕಾಗಿನೆಲೆ
ಬ್ಯಾಡಗಿ
ದೇವರಗುಡ್ಡ
ಹೊಂಕಣ
ಕದರಮಂಡಲಗಿ
ತಿಳುವಳ್ಳಿ
ರಾಣೆಬೆನ್ನೂರು
ಐರಣಿ
ಕೃಷ್ಣಮೃಗಧಾಮ
ಚಿನ್ನಮುಳಗುಂದ
ಆನವಟ್ಟಿ
ಅಬಲೂರು
ಹರಿಹರ
ಹರಿಹರ
ಹಿರೇಕೆರೂರು
ರಟ್ಟಿಹಳ್ಳಿ
ಮಾಸೂರು
ಹಳ್ಳೂರು
ಜಿಲ್ಲಾ ಕೇಂದ್ರ
ತಾಲ್ಲೂಕು ಕೇಂದ್ರ
ಪ್ರವಾಸಿ ಕೇಂದ್ರ
ರಾಷ್ಟ್ರೀಯ ಹೆದ್ದಾರಿ
ರೈಲ್ವೆ ಮಾರ್ಗ